ದಿನಾಂಕಃ 06.11.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಎಸ್.ಬಿ.ಎ. ವಕೀಲರಿಂದ:**

ನನ್ನ ಅಜ್ಜನ ಹೆಸರು ಸುಬ್ಬೇಗೌಡ ಎಂದರೆ ನನಗೆ ನೆನಪಿಲ್ಲ. ನನ್ನ ತಂದೆ ಲಕ್ಷ್ಮಣಗೌಡ ಸುಬ್ಬೇಗೌಡ ಎನ್ನುವವರ ಮಗ. ಆ ಸುಬ್ಬೇಗೌಡರವರಿಗೆ ಒಟ್ಟು 4 ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಸುಬ್ಬೇಗೌಡರವರಿಗೆ ಕಲ್ಲೇಗೌಡ, ಮಂಜೇಗೌಡ, ಬೈರೇಗೌಡ ಮತ್ತು ಲಕ್ಷ್ಮಣಗೌಡ ಎನ್ನುವ ಹೆಸರಿನ 4 ಜನ ಮಕ್ಕಳು ಇದ್ದರು ಎಂದರೆ ಸಾಕ್ಷಿಯು ಮಂಜೇಗೌಡ, ಬೈರೇಗೌಡ ಮತ್ತು ಲಕ್ಷ್ಮಣಗೌಡ ರವರ ಬಗ್ಗೆ ಮಾತ್ರ ನನಗೆ ಗೊತ್ತಿದೆ ಎಂದು ನುಡಿಯುತ್ತಾರೆ. ಸುಬ್ಬೇಗೌಡರವರಿಗೆ ಎಷ್ಟು ಜನ ಮಕ್ಕಳು ಎಂದು ತಿಳಿದುಕೊಳ್ಳಲು ನಾನು ಪ್ರಯತ್ನಿಸಿಲ್ಲ. ಈ ದಾವೆಯಲ್ಲಿ ನಾನು ಏನೆಲ್ಲಾ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನನಗೆ ಗೊತ್ತಿದೆ, ಆದರೆ ಪ್ರತಿವಾದಿಗಳು ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಸಲ್ಲಿಸಿರುವ ದಾಖಲೆಗಳ ಬಗ್ಗೆ ತಿಳಿದುಕೊಳ್ಳಲು ನಾನು ಪ್ರಯತ್ನಿಸಲಿಲ್ಲ. ಈಗ ನೋಡುತ್ತಿರುವ ನಿಪಿ-1 ರ ಪಹಣಿಯನ್ನು ನಾನು ಈ ಹಿಂದೆ ನೋಡಿಲ್ಲ. ನಿಪಿ-1 ರ ಪಹಣಿಯಲ್ಲಿ ಪ್ರತಿವಾದಿಗಳ ಹೆಸರಿಗೆ ಎಷ್ಟು ಜಮೀನನ್ನು ತೋರಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಕಾರ ಸ.ನಂ.40 ರಲ್ಲಿ 1 ಮತ್ತು 2 ನೇ ಪ್ರತಿವಾದಿಗಳಿಗೆ 3 ಎಕರೆ 14 ಗುಂಟೆ ಜಮೀನು, 3 ನೇ ಪ್ರತಿವಾದಿಗೆ 1 ಎಕರೆ ಮತ್ತು 4 ನೇ ಪ್ರತಿವಾದಿಗೆ 35 ಗುಂಟೆ ಜಮೀನು ಇದೆ.

ಪ್ರತಿವಾದಿಗಳ ಹೆಸರಿಗೆ ಯಾವ ಆಧಾರದ ಮೇಲೆ ಖಾತೆಯಾಗಿದೆ ಎಂದು ನನಗೆ ಗೊತ್ತಿಲ್ಲ. ದಾವ ಜಮೀನು ನನ್ನ ತಂದೆಗೆ ಯಾವ ಆಧಾರದ ಮೇಲೆ ಬಂತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಗೆ ದಾವ ಜಮೀನು ಹೇಗೆ ಬಂತು ಎಂದು ತೋರಿಸುವ ಸಂಬಂಧ ದಾಖಲೆಯನ್ನು ಹಾಜರುಪಡಿಸಲು ನನಗೆ ತೊಂದರೆ ಇದೆ. ನನ್ನ ತಂದೆಗೆ ದಾವ ಜಮೀನು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲದ ಕಾರಣ ದಾಖಲೆಯನ್ನು ಹಾಜರುಪಡಿಸಲು ತೊಂದರೆಯಾಗುತ್ತದೆ. ನಿಪಿ-4 ರ ಜುಬಾನೆ ಹಿಸ್ಸೆ ಮಾಡಿಕೊಳ್ಳುವ ಸಮಯಕ್ಕೆ ದಾವ ಜಮೀನು ನನ್ನ ತಂದೆಗೆ ಹೇಗೆ ಬಂತು ಎಂದು ನನಗೆ ಗೊತ್ತಿರಲಿಲ್ಲ ಎಂದರೆ ಸರಿ. ಸದರಿ ಜಮೀನು ನನ್ನ ತಂದೆಗೆ ಹೇಗೆ ಬಂತು ಎಂದು ನನ್ನ ಸಹೋದರ ಮತ್ತು ಸಹೋದರಿಯರಿಗೆ ತಿಳಿದಿದೆಯ ಎಂದು ನನಗೆ ಗೊತ್ತಿಲ್ಲ. ನಿಪಿ-4 ರ ದಾಖಲೆಯನ್ನು ನಾನು ಸಂಪೂರ್ಣವಾಗಿ ಓದಿದ್ದೇನೆ. ಯಾವ ಆಧಾರದ ಮೇಲೆ ನನ್ನ ತಂದೆಗೆ ದಾವ ಜಮೀನು ಬಂದಿತ್ತು ಎಂದು ನಿಪಿ-4 ರಲ್ಲಿ ಕಾಣಿಸಿಲ್ಲ. ನಿಪಿ-4 ರ ಮುಖಪುಟದಲ್ಲಿ ಕಂಡುಬರುತ್ತಿರುವ ಅ.ದಾ.ಸಂ.66/1995 ರ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಸಹೋದರ ಮತ್ತು ಸಹೋದರಿಯರು ನನ್ನ ವಿರುದ್ಧ ಈ ಹಿಂದೆ ದಾವ ಸಲ್ಲಿಸಿದ್ದಾರ ಎಂದು ನನಗೆ ಗೊತ್ತಿಲ್ಲ. ಬಿ.ಎಲ್. ಮಂಜುನಾಥ್ ನನ್ನ ಅಣ್ಣ.

ಬಿ.ಎಲ್. ಮಂಜುನಾಥ್ ರವರು ನನ್ನ ವಿರುದ್ಧ ಒಂದು ಸಿವಿಲ್ ದಾವೆ ಸಲ್ಲಿಸಿದ್ದರು ಎಂದರೆ ನನಗೆ ನೆನಪಿಲ್ಲ. ಈಗ ನೋಡುತ್ತಿರುವ ನಿಪಿ-2 ರಲ್ಲಿ ಏನು ಬರೆದಿದೆ ಎಂದು ಈಗ ನನಗೆ ನೆನಪಿಲ್ಲ. ನಿಪಿ-2 ರಲ್ಲಿ ಉಲ್ಲೇಖಿಸಿರುವ ನ್ಯಾಯಾಲಯದ ಆದೇಶ ಯಾವ ನ್ಯಾಯಾಲಯಕ್ಕೆ ಸಂಬಂಧಪಟ್ಟದ್ದು ಎಂದು ನನಗೆ ನೆನಪಿಲ್ಲ. ಬಿ.ಎಲ್. ಮಂಜುನಾಥ್ ರವರು ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ದಾವೆಯಲ್ಲಿ ನಾನು ವಕೀಲರ ಮೂಲಕ ಹಾಜರಾಗಿದ್ದೆ ಎಂದು ನನಗೆ ನೆನಪಿಲ್ಲ. ಆ ದಾವೆ

ವಜಾ ಆಗಿ ನನಗೆ ಅನುಕೂಲವಾಯಿತು ಎಂದರೆ ಇರಬಹುದು. ಬಕ್ಕಿ ಗ್ರಾಮದ ಸ.ನಂ.106/4 ರ 3 ಎಕರೆ 11 ಗುಂಟೆ ಜಮೀನು ಹಾಗೂ ಸ.ನಂ.148/ಪಿ ರ 6 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಆ ದಾವೆಯನ್ನು ಸಲ್ಲಿಸಲಾಗಿತ್ತು ಎಂದರೆ ಇರಬಹುದು. ದಾವ ಜಮೀನು ಮೂಲತಃ ಕಾಫೀ ಪ್ಲಾಂಟೇಷನ್ ಜಮೀನಾಗಿದೆ. ಸದರಿ ಜಮೀನು ಯಾವತ್ತು ಸಹಾ ತರಿ ಜಮೀನು ಆಗಿರಲಿಲ್ಲವ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆ ಕಾಲದಿಂದಲೂ ಅದು ಕಾಫೀ ಪ್ಲಾಂಟೇಷನ್ ಜಮೀನಾಗಿದೆ ಎಂದು ನುಡಿಯುತ್ತಾರೆ. ನನ್ನ ಹಾಗೂ ನನ್ನ ಸಹೋದರ ಸಹೋದರಿಯರ ನಡುವೆ ಯಾವ ವರ್ಷ ಜುಬಾನೆ ಹಿಸ್ಸೆಯಾಯಿತು ಎಂದು ನನಗೆ ನೆನಪಿಲ್ಲ. ಆ ಜುಬಾನೆ ಹಿಸ್ಸೆ ಮಾಡಿಕೊಳ್ಳುವ ಸಮಯಕ್ಕೂ ದಾವ ಜಮೀನು ಕಾಫೀ ಪ್ಲಾಂಟೇಷನ್ ಆಗಿತ್ತು. ನಿಪಿ-2 ರಲ್ಲಿ ಬಕ್ಕಿ ಗ್ರಾಮದ ಸ.ನಂ.40 ರ ಜಮೀನು ತರಿ ಜಮೀನು ಎಂದು ನಮೂದಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-2 ರಲ್ಲಿ ಉಲ್ಲೇಖಿಸಿರುವ ತಹಶೀಲ್ದಾರ್ ರವರ ಆದೇಶ ಯಾವುದರ ಬಗ್ಗೆ ಎಂದು ನನಗೆ ಗೊತ್ತಿಲ್ಲ.

ಪಾಲುಪಟ್ಟಿಯ ಆಧಾರದ ಮೇಲೆ ದಾವ ಜಮೀನಿನ ಚೆಕ್ಕುಬಂದಿಯನ್ನು ವಾದಪತ್ರದಲ್ಲಿ ತೋರಿಸಿದ್ದೇನೆ. ಪಾಲುಪಟ್ಟಿಯಲ್ಲಿ ಬರೆದಿರುವ ದಾವ ಜಮೀನಿನ ಚೆಕ್ಕುಬಂದಿ ಸರಿ ಇದೆಯಾ ಎಂದು ನನಗೆ ಗೊತ್ತಿಲ್ಲ. ದಾವ ಜಮೀನಿನ ಉತ್ತರ ದಿಕ್ಕಿಗೆ 1 ಮತ್ತು 2 ನೇ ಪ್ರತಿವಾದಿಯರ ಜಮೀನು ಇದೆ. ಈ ವಿಚಾರವನ್ನು ಪಾಲುಪಟ್ಟಿಯಲ್ಲಿ ಬರೆಯಲಾಗಿದೆಯಾ ಎಂದು ನಾನು ಓದಿ ನೋಡಿಲ್ಲ. ದಾವ ಸಲ್ಲಿಸುವ ಕಾಲಕ್ಕೆ ನಾನೇ ದಾವ ಜಮೀನಿನ ಚೆಕ್ಕುಬಂದಿಯ ಬಗ್ಗೆ ಮಾಹಿತಿ ನೀಡಿದ್ದೆ. ದಾವ ಸಲ್ಲಿಸುವ ಕಾಲಕ್ಕೆ ದಾವ ಜಮೀನಿನ ಉತ್ತರ ದಿಕ್ಕಿಗೆ 1 ಮತ್ತು 2 ನೇ ಪ್ರತಿವಾದಿಯರ ಜಮೀನು ಇದೆ ಎಂದು ಮಾಹಿತಿ ನೀಡಿದ್ದೆ. ನಿಪಿ-4 ರ ಪ್ರಕಾರ ದಾವ ಜಮೀನಿನ ಉತ್ತರ ದಿಕ್ಕಿಗೆ ಸ.ನಂ.42/ಪಿ ರ ಜಮೀನು ಇದೆ ಎಂದು ತೋರಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವ ಜಮೀನು ಪಕ್ಕಾ ಪೋಡಿಯಾಗಿಲ್ಲ ಎಂದರೆ ಸರಿ. ದಾವ ಜಮೀನಿನ ಪಕ್ಕಾ ಪೋಡಿ ಮಾಡಿಸಲು ಅರ್ಜಿ ಸಲ್ಲಿಸಿಕೊಂಡಿಲ್ಲ. ಆದರೆ ನಮಗೆ 6 ಎಕರೆ 23 ಗುಂಟೆ ಜಮೀನು ಇದೆಯಾ ಇಲ್ಲವ ಎಂದು ತಿಳಿದುಕೊಳ್ಳಲು ಸರ್ವೇ ಮಾಡಿಸಲು ಅರ್ಜಿ ಸಲ್ಲಿಸಿಕೊಂಡಿದ್ದೆ. ಆ ಅರ್ಜಿಯನ್ನು ಯಾವ ದಿನಾಂಕ ಕೊಟ್ಟಿದ್ದೆ ಎಂದು ನನಗೆ ನೆನಪಿಲ್ಲ. ಆ ಅರ್ಜಿಯ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನ ಇಲ್ಲವ ಎಂದು ನನಗೆ ನೆನಪಿಲ್ಲ. ಆದರೆ ಅದನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ.

ನಾನು ಒಂದು ಬಾರಿ ಸರ್ವೇಗೆ ಅರ್ಜಿ ಸಲ್ಲಿಸಿದ್ದು ಮಾತ್ರ ನನಗೆ ನೆನಪಿದೆ. ಯಾರು ಮೊದಲು ಸರ್ವೇಗೆ ಅರ್ಜಿ ಕೊಡುತ್ತಾರೋ ಅವರ ಜಮೀನನ್ನು ಮೊದಲು ಸರ್ವೇ ಮಾಡುತ್ತಾರೆ ಎಂದರೆ ಸರಿ. ಪ್ರತಿವಾದಿಗಳು ನನ್ನ ವಿರುದ್ಧ ಬಣಕಲ್ ಪೋಲಿಸ್ ಠಾಣೆಯಲ್ಲಿ ಅನೇಕ ಪ್ರಕರಣಗಳನ್ನು ದಾಖಲಿಸಿದ್ದಾರೆ ಎಂದರೆ ಸರಿ. ಸಾಕ್ಷಿಯು ಸ್ವತಃ ಅವರೇ ನಮಗೆ ತೊಂದರೆ ಕೊಡುತ್ತಿದ್ದಾರೆ ಎಂದು ನುಡಿಯುತ್ತಾರೆ. ನಿಪಿ-20 ಯಾವ ದಾಖಲೆ ಎಂದು ನನಗೆ ಕಾಣುತ್ತಿಲ್ಲ. ನಿಪಿ-20 ರಲ್ಲಿ ಏನೆಲ್ಲಾ ಬರೆದಿದೆ ಎಂದು ನಾನು ತಿಳಿದುಕೊಂಡಿದ್ದೆ, ಆದರೆ ಈಗ ನನಗೆ ನೆನಪಿಲ್ಲ. ನಿಪಿ-20 ರಲ್ಲಿ ನಂಜಮ್ಮ ಕೋಂ ಕಲ್ಲೇಗೌಡರವರ ಹೆಸರು ನಮೂದಾಗಿದೆ ಎಂದರೆ ಇರಬಹುದು, ಆದರೆ ನನಗೆ ನೆನಪಿಲ್ಲ. ಸದರಿ ನಂಜಮ್ಮ ಯಾರು ಎಂದು ನಾನು ತಿಳಿದುಕೊಂಡಿಲ್ಲ. ನಿಪಿ-22 ರಲ್ಲಿ ಸ.ನಂ.40 ರ 12 ಎಕರೆ 27 ಗುಂಟೆ ಪೈಕಿ 1 ಎಕರೆ 27 ಗುಂಟೆ ಕರಾಬು ಎಂದು ನಮೂದಾಗಿದೆ ಎಂದರೆ ನನಗೆ ನೆನಪಿಲ್ಲ. ಮಂಜೇಗೌಡ ಎನ್ನುವವರ

ಪರಿಚಯ ನನಗಿದೆ. ಅವರು ನನ್ನ ದೊಡ್ಡಪ್ಪ. ಸ.ನಂ.40 ರ ಖಾತೆ ಹಿಂದೆ ನಂಜಮ್ಮ, ಮಂಜೇಗೌಡ ಮತ್ತು ಲಕ್ಷ್ಮಣಗೌಡ ರವರ ಹೆಸರಿಗೆ ಜಂಟಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸ.ನಂ.40 ರಲ್ಲಿ ಇಂದಿಗೂ ಸಹಾ ಕಲ್ಲೇಗೌಡರವರ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಕಲ್ಲೇಗೌಡರವರಿಗೆ ಮಕ್ಕಳು ಇದ್ದಾರ ಎಂದು ನಾನು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ನಂಜಮ್ಮ ಮತ್ತು ಕಲ್ಲೇಗೌಡರವರು ಸ.ನಂ.40 ರ ತಮ್ಮ ಜಮೀನನ್ನು ಇಂದಿಗೂ ಸಹಾ ಯಾರಿಗೂ ಬರೆದುಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸ.ನಂ.40 ರಲ್ಲಿ 6 ಎಕರೆ 23 ಗುಂಟೆ ಯ ಸಂಪೂರ್ಣ ಜಮೀನಿನ ಮೇಲೆ ನನಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. CRC ಯನ್ನು ಪಹಣಿಯ ಆಧಾರದ ಮೇಲೆ ಬರೆಯಲಾಗುತ್ತಿತ್ತು ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.